ಒಮ್ಮೆ ನಮ್ಮ ಚಾಲಕನಿಗೆ ಈಗ ಮಾರ್ಕೆಟ್‌ಗೆ ಹೋಗಿ, ಸ್ವಲ್ಪ ತರಕಾರಿ, ಹಣ್ಣು ತಗೊಂಡು ನನ್ನ ಸ್ನೇಹಿತರ ಮನೆಗೆ ಹೋಗೋಣ. ಬರ್‍ತಾ ಹಾಗೇ ಟೈಲರ್ ಹತ್ತಿರ ಹೋಗಿ ಬಟ್ಟೆ ಈಸಿಕೊಂಡು ಬರ್ಬೇಕು ಅಂದೆ.

'ಓಕೆ ಡನ್!...' ಎಂದು ಉತ್ತರ ಬಂದಿತು. ತಬ್ಬಿಬ್ಬಾದ ನಾನು 'ಹಾಗಂದರೇನು?' ಎಂದು ಕೇಳಿದೆ. 'ಅಂದರೆ ಆಯ್ತು ನಡೀರಿ ಅಂತ. ಸುಮ್ನೆ ನಡೀರಿ ಮಂತೆ' ಎಂದು ಚಾಲಕ ಗಡಿಬಿಡಿ ಮಾಡಿದ.

ಒಳ್ಳೆ ಮೂಡ್‌ನಲ್ಲಿದ್ದಾಗ ಹೀಗೆಲ್ಲಾ ಐಲಾಟದ ಮಾತುಗಳನ್ನಾಡುವ ಚಾಲಕನಿಗೆ ಇದ್ದಕ್ಕಿದ್ದ ಹಾಗೆ ನಮ್ಮ ಕಡೆ ಭಾಷೆಯಲ್ಲಿ ಹೇಳುವುದಾದರೆ ಒಂತರಾ 'ಬೆರಗು' ಬಂದುಬಿಟ್ಟರೆ... ಒಂದು ಬೆಳಿಗ್ಗೆ ಎಂದಿನಂತೆ ಚಾಲಕ ಬಂದಾಗ ನಮ್ಮವರು ನಡೀ ಮಟನ್ ಮಾರ್ಕೆಟ್‌ಗೆ ಹೋಗೋಣ ಎಂದಾಗ ಒಂದು ಸ್ವಗತ ಲಹರಿ ಮೊಳಗತೊಡಗಿತು. 'ನಮ್ಮ ಬಾಮೈದ, ಭಾವ ಎಲ್ಲ ಎಳ್ತಾರೆ, ನಿನಗ್ಯಾಕೆ ಈ ಭಂಗ, ಮುವ್ವತ್ತು, ಐವತ್ತು ರೂಪಾಯಿಗೆ ಜುಜುಬಿ ಬಾಡ್ಗೆ ಒಡಿಯೋದು? ಓಗು, ಡಿ.ಸಿ.ಆಫೀಸ್ ಮುಂದೆ ನಿಂತ್ಕೊ, ಒಂದು ಸತಿಗೆ ನೂರು ರೂಪಾಯಿ ಬಾಡಿಗೆ ಕೊಡ್ತಾರೆ. ಉಡ್ಗ, ಉಡ್ಗೀನ ಬೆಟ್ಟದ ಕಿಬ್ಬಿಗೆ ಕರ್ಕೊಂಡೋಗಿ ಬಿಟ್ಬಿಡು. ಇನ್ನೂರು ರೂಪಾಯಿ ಸಿಗ್ತದೆ. ಲವರ್ಸ್ ಎಷ್ಟಾದರೂ ಕೊಡ್ತಾರೆ. ಇಲ್ಲಾ ಬ್ಯಾಂಕ್‌ನವರ ಬಾಡ್ಗೆ ಒಡಿ. ದಿವಸಕ್ಕೆ ಇಂತದು 2–3 ಬಾಡ್ಗೆ ಒಡ್ದು, ಕಡ್ದು ಮನೆಗೆ ಬಾ. ಬೆಳಗಿಂದ ಸಂಜೆವರ್ಗೆ ಯಾಕೆ ಆ ಮೂಲೇಲಿ ನಿಂತ್ಕಂಡು ಸಾಯ್ತೀಯ, ನಿನಗೇನು ಯಾರೂ ನಮ್ಮವರು ತಮ್ಮವರು ಅನ್ನೋರು ಬ್ಯಾಡ್ವ? ನೀನು ಸತ್ತರೆ ನೀನೇ ಓಗಿ ಗುಂಡೀಲಿ ಮಲಿಕತಿಯಾ? ನಾವ್ ತಾನೆ ನಿನ್ನ ಮಣ್ ಮಾಡೋವ್ರು, ಯಾರ ಕಷ್ಟ ಸುಖಕ್ಕೂ ನೀನು ಬರಾದೇ ಬ್ಯಾಡ್ವ?' ಹೀಗೆ ಒಂದೇ ಸಮನೆ ಎತ್ತು ಉಚ್ಚೆ ಹುಯ್ದಂಗೆ ಬಡಬಡಿಸಿ ಚಾಲಕ ಸುಮ್ಮನಾದ. ನಮ್ಮವರಿಗೆ ಈ ಸ್ವಗತದ ಮರ್ಮ ಗೊತ್ತಾಯಿತು. ಅವರು 'ಆಗ್ಲಪ್ಪಾ, ನಾಳೆ, ನಾಡಿದ್ದು ಕನ್ನಂಬಾಡಿಕಟ್ಟೆಯಿಂದ ಕುಚ್ಚಲು ಮೀನು ತರಿಸ್ತೀನಿ. ನಿನಗೆ ಬೇಕಾದಷ್ಟು ಕೊಡ್ತೀನಿ. ಅದನ್ನ ತಗೊಂಡು ಬ್ಯಾಂಕಿನ ಬಾಡಿಗೆಗೊ, ಡಿ.ಸಿ. ಆಫಿಸಿಗೊ ಒಗೊವಂತೆ, ಈಗ ನಡಿ ಮಾರ್ಕೆಟ್‌ಗೆ' ಎಂದರು. 'ನಡೀರಿ ಓಗಾವ' ಮಾರುತ್ತರ ಸಲೀಸಾಗಿ ಬಂದಿತು.

ಮದುವೆ ಮನೆಗೆ ಹೋಗಬೇಕಿತ್ತು. ನಮ್ಮ ಚಾಲಕ ಪತ್ತೆ ಇಲ್ಲ. ನಮ್ಮ ಆಟೊ ಸ್ಟಾಂಡಿನ ಇನ್ನೊಬ್ಬ ಗುರುತಿನವರ ಆಟೊದಲ್ಲಿ ಹೊರಟೆ. ಆ ಆಟೊ ಡ್ರೈವರ್ ಪಾಪಣ್ಣ 'ಯಾಕ್ರಮ್ಮ ನಿಮ್ಮ ಮಾಮೂಲಿ ಆಸಾಮಿ, ನಮ್ಮ ಅಣ್ಣೋರು ಬರಲಿಲ್ವಾ' ಎಂದು ಕೇಳಿದ. 'ಅವರ ಹೆಂಡತಿಗೆ ಹುಶಾರಿಲ್ಲವಂತೆ, ಆಸ್ಪತ್ರೆಗೆ ಕರೆದುಕೊಂಡು ಹೋಗ್ಬೇಕಂತೆ' ಎಂದೆ. ಪಾಪಣ್ಣ 'ಕ್ಕಿ... ಕ್ಕೀ... ಕ್ಕೀ...' ಎಂದು ನಗುತ್ತ, 'ಅಯ್ಯೊ ಅಮ್ಮಾ ಅವನ ಜೂರತ್ ಎಲ್ಲಾ ನಮ್ಮೆದುರಿಗೆ. 'ಏ...ಯ್ ನಾನು ಕೊಪ್ಪಲಿನವ್ನು ಉಸಾರ್' ಅಂತ ನಮ್ಮೆದುರಿಗೆ ಗೊಡ್ಡು ಬೆಜ್ಜರಿಕೆ ಆಕ್ತಾನೆ. ನಾವು ಎದರ್‍ಕಂಡಂಗೆ ಮಾಡಿ ಇಲ್ಲಾ ಕಣಣ್ಣೊ ಅಂದ್ರೆ ಬಡಪಾಯಿಗೆ ತೃಪ್ತಿ. ಇಂಗೆ ಒಂದಿವ್ಸ ಅವನು ಲೈನ್ ಮೇಲೆ ಬರದೇ ಇದ್ದಾಗ ಬಾಡ್ಗೆ ಸಿಕ್ಕೂತ ಅವ್ನ ಮೊಹಲ್ಲಾ ಕಡೆ ಓದವನು ಅವನ ಮನೆ ಕಡೆ ಓದೆ. ನೋಡ್ತೀನಿ, ಎಡ್ತಿ ಕುರ್ಚಿ ಮೇಲೆ ಕುಂತವ್ಳೆ, ಇವನು ಚಕ್ಕಲ ಬಕ್ಲೆ ಕೂತ್ಗಂಡು ಕಿತ್ತಲೆ ಅಣ್ಣಿನ ತೊಳೆ ಬಿಡ್ಸಿ ಬಿಡ್ಸಿ ಕೊಡಕ್ಕೆ ಅವಳು ತಿನ್ನಕ್ಕೆ. ಇದ್ಯಾಕಣ್ಣ ಲೈನ್ ಮೇಲೆ ಬರ್ಲಿಲ್ಲಾ ಅಂದೆ. ಅಯ್ಯೊ ನಮ್ ಎಡ್ತಿಗೆ ಸುಸ್ತು. ಅದಕ್ಕೆ ಇವತ್ತು ರಜಾ ತಗೊಂಡೆ ಅಂದ. ಆಯಮ್ಮ ಟೀ ಕಾಯಿಸ್ತೀನಿ ಅಂತ ಉಸ್ ಅಂತ ಒಳಕ್ಕೆ ಓದ್ಲು. ದಿನಾ ನಂಗೆ ಇದೇ ಚಾಕ್ರಿ ಕಣ್ ಪಾಪಣ್ಣ ಅಂತ ಮೆತ್ಗೆ ಏಳ್ದ. ಇವನು ಚೋರುಕಾ ಗುಲಾಂ! ಎಲ್ಲೊ ಎಡ್ತಿ ಕೂರಸ್ಗಂಡವ್ನೆ' ಎಂದಾಡಿದ. 'ಹೋಗಲಿ ಬಿಡಿ ಪಾಪಣ್ಣ, ಗಂಡ